

# ನಕ್ಕುಬಿಡಿ




ಗೆಳೆಯ: ಲೋ ಗುಂಡ ಲೂಸ್ ಮೋಷನ್ ಶುರುವಾದರೆ ಏನು ಮಾಡಬೇಕು?

ಗುಂಡ: ತಕ್ಷಣ ಟಾಯ್ಲೆಟ್ ಕಡೆ ಓಡಿ ಹೋಗಬೇಕು

ರಾಯರು: ನಿಮ್ಮ ಮಗ ಪೊಲೀಸ್ ಆಗಬೇಕೋ ಇಲ್ಲಾ ಕಳ್ಳ ಆಗಬೇಕೋ?

ಗುಂಡ: ಪೊಲೀಸ್ ಆದರೆ ಸಾಕು. ಎಲ್ಲಾ ಆದ ಹಾಗಲ್ಲವೇ?

***

ಗೆಳೆಯ: ಲೋ ಗುಂಡ ಸತ್ತ ಮೇಲೆ ದೇಹ ತುಂಬಾ ಭಾರವಾಗಿರುತ್ತದಲ್ಲ ಯಾಕೆ?

ಗುಂಡ: ಭೂಮಿಗೆ ಭಾರ ಎಂಬಂತೆ ಹಗುರವಾಗಿ ಬದುಕಿರುತ್ತೇವಲ್ಲ ಅದಕ್ಕೆ.

***

ಗುಂಡ: ಏನು ನಿರ್ದೇಶಕರೇ ನಿಮ್ಮ ಸಿನಿಮಾದಲ್ಲಿ ಇಂಟರ್ವೆಲ್ ಇರುವುದಿಲ್ಲವಂತೆ ಯಾಕೆ?

ನಿರ್ದೇಶಕ: ಹೌದು! ಪಾಪ ಪ್ರೇಕ್ಷಕರು ಸಿನಿಮಾನ ಅರ್ಧದಷ್ಟನ್ನು ಮಾತ್ರಾ ನೋಡಿ ಎದ್ದು ಹೋಗಬಾರದಲ್ಲ ಅದಕ್ಕೆ

***

ಹೆಂಡತಿ: ರೀ ಅದೃಷ್ಟವಂತನಿಗೆ ಇಂಗ್ಲಿಷಿನಲ್ಲಿ ಏನಂತ ಹೇಳ್ತಾರೆ?

ಗುಂಡ: ಬ್ಯಾಚುಲರ್.

***

ಕೈದಿ: ನಿನ್ನನ್ನು ಯಾಕೆ ಅರೆಸ್ಟ್ ಮಾಡಿದರು?

ಗುಂಡ: ಟೆಸ್ಟ್ ಇಟ್ಟಿದ್ದರು. ಪಾಸಾದೆ. ಅರೆಸ್ಟ್ ಮಾಡಿದರು

ಕೈದಿ: ಅರೆ ಟೆಸ್ಟ್ ಪಾಸಾಗಿದ್ದಕ್ಕೆ ಅರೆಸ್ಟ್ ಮಾಡಿದರಾ? ಯಾವ ಟೆಸ್ಟ್?

ಗುಂಡ: ಡ್ರಂಕ್ ಅಂಡ್ ಡ್ರೈವ್ ಟೆಸ್ಟ್

***

ಗುಂಡ: ಲೋ ಗೆಳೆಯ ಮುಖ್ಯಮಂತ್ರಿಗಳು ಕೊರೊನಾ ಕಾರಣದಿಂದ ಇಡೀ ರಾಜ್ಯಕ್ಕೆ ಬೀಗ ಜಡೀತಾರಂತೆ. ಆದರೆ ನನಗೊಂದು ಅನುಮಾನ.

ಗೆಳೆಯ: ಏನೋ ಅದು?

ಗುಂಡ: ಅಲ್ಲ ಅಷ್ಟು ದೊಡ್ಡ ಬೀಗಾನಾ ಅವರು ಎಲ್ಲಿಂದ ತರಿಸ್ತಾರಂತೆ?

***

ಆಗಂತುಕರು: ವಾಹ್ ಎಷ್ಟು ದೊಡ್ಡ ಮನೆ?

ಗುಂಡ: ಹೌದು ಸಾರ್ ನಾವು ತುಂಬಾ ಸಿರಿವಂತರು

ಆಗಂತುಕರು: ಅರೆ ಎಂತಹ ಸೂಪರ್ ಕಾರು?

ಗುಂಡ: ಹೌದು! ನಾವು ಲಕ್ಷಾಧೀಶರು

ಆಗಂತುಕರು: ಅರೆ ಇದೇನಿದು ಕೆ.ಜಿ.ಗಟ್ಟಲೆ ಚಿನ್ನ?

ಗುಂಡ: ಹೂಂ ನಾವು ಕೋಟ್ಯಧೀಶರು

ಆಗಂತುಕರು: ಹಾಗಾದರೆ ತಗೊಳ್ಳಿ ಈ ಪತ್ರ

ಗುಂಡ: ಏನಿದು?

ಆಗಂತುಕರು: ನೋಟಿಸ್! ನಾವು ಆದಾಯ ತೆರಿಗೆ ಇಲಾಖೆಯವರು

(ಸಂಗ್ರಹ) ಎಂ.ಕೆ. ಮಂಜುನಾಥ್

ಜ್ಯೋತಿಷಿ: ಬನ್ನಿ ನಿಮ್ಮ ಗಂಡನ ಭವಿಷ್ಯ ಹೇಳ್ತೀನಿ. ನಿಮಗೆ ಉಪಯೋಗಕ್ಕೆ ಬರಬಹುದು.

ಗುಂಡಿ: ನನಗೇನು ನೀವು ಭವಿಷ್ಯ ಹೇಳೋದು ಬೇಕಾಗಿಲ್ಲ. ಅವರ ಭವಿಷ್ಯ ನನ್ನ ಕೈಯಲ್ಲೇ ಇದೆ.

***

ಜುಗ್ಗ: ಯಾಕೋ, ಪುಂಡ ತುಂಬ ಬೇಜಾರಾಗಿ ಕೂತ್ಗಂಡಿಯಲ್ಲ.

ಪುಂಡ: ನನ್ನೆಂಡ್ತಿ ಕ್ವಾರಂಟೈನ್, ಇವತ್ತಿಗೆ ಮುಗೀತು ಮಾರಾಯಾ.

ಜುಗ್ಗ: ಅದನ್ಯಾಕೆ ಅಷ್ಟೊಂದು ಬೇಜಾರಿಂದ ಹೇಳ್ತಿ. ಖುಷಿಯಿಂದ ಹೇಳು.

ಪುಂಡ: ಖುಷಿ ಎಲ್ಲೀದು. ಅವಳು ಇವತ್ತೇ ಮನೆಗೆ ಬರ್ತಿದಾಳೆ.

***

ಜುಗ್ಗ: ಕೊರೊನ ದೇವರಂತೆ ಬಂದು ನನ್ನನ್ನು ಕಷ್ಟದಿಂದ ಪಾರುಮಾಡ್ತು.

ಗುಂಡ: ಅದ್ಹೇಗೆ?

ಜುಗ್ಗ: ಅಂದ್ರೆ ನನ್ನ ಒಬ್ಬ ಮಗಳ ಮದುವೆಗೆ ಅಂತ ಕೂಡಿಟ್ಟ ದುಡ್ಡಲ್ಲಿ ಮೂವರು ಮಕ್ಕಳ ಮದುವೆ ಮಾಡಿಬಿಟ್ಟೆ.

***

ಪುಂಡ: ಹೆಚ್ಚು ಆಸೆ ಪಡೋದು ತಪ್ಪಲ್ಲ ಅಲ್ವೇನೋ?

ಜುಗ್ಗ: ಅದಕ್ಕೇನೀಗ.

ಪುಂಡ: ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಕೋಟಿ ರೂಪಾಯಿ ಅನ್ನಲ್ವಾ?

ಜುಗ್ಗ: ಹೌದು ಅಂತಾರೆ.

ಪುಂಡ: ಹಾಗಿದ್ದರೆ ಎರಡು ಕೋಟಿ ಬೇಕು ಅನ್ನೋದ್ರಲ್ಲಿ ತಪ್ಪೇನಿದೆ.

***

ಪುಂಡ ಮತ್ತು ಗುಂಡಿ ಮದುವೆಯಾಗಿ ಎರಡು ವರ್ಷವಾಗಿತ್ತು. ಅಂದು ವಿವಾಹ ವಾರ್ಷಿಕೋತ್ಸವವಿತ್ತು.

ಗುಂಡಿ: ನೋಡಿ ರಾಜಾ, ಏಳೇಳು ಜನುಮಕೂ ನೀವೇ ನನ್ನ ಪತಿಯಾಗಿರಬೇಕು ಅನ್ನೋದು ನನ್ನ ಆಸೆರಿ. ನೀವೇನಂತೀರಿ?

ಪುಂಡ: ವಿಚಾರ ಮಾಡಿ ಹೇಳ್ತೀನಿ.

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ

